# ಕಲಾವಿದೆಯರ ಕುಂಚದಲ್ಲಿ ಕನ್ನಡದ ಸಾಂಸ್ಕೃತಿಕ ಸಿರಿ

**ಕಲರ್ಸ್ ಆಫ್ ಕನ್ನಡ! ಬಣ್ಣಗಳು ಇರುವುದು ಹೆಸರಿನಲ್ಲಿ ಮಾತ್ರವಲ್ಲ, ಕಲಾಕೃತಿಗಳ ವ್ಯಕ್ತಿತ್ವವೂ ವರ್ಣಮಯ. ಕಲಾವಿದೆಯರ ಹಿನ್ನೆಲೆಯೂ ವಿಭಿನ್ನ.**

**■ ಆರ್‌.ಕೆ.**

ಒಲವು–ನಿಲುವುಗಳನ್ನು ಸಂಕೇತಿಸುವ ಬಣ್ಣಗಳು, ಭಾವನೆಗಳನ್ನು ಅರಳಿಸುವ ಜೊತೆಗೆ ಕೆರಳಿಸುವುದನ್ನೂ ವರ್ತಮಾನದಲ್ಲಿ ನೋಡುತ್ತಿದ್ದೇವೆ. ಧರ್ಮ–ಜಾತಿಯ ಉದ್ದೀಪನದ ರೂಪದಲ್ಲಿ ಬಣ್ಣಗಳು ಕಾಣಿಸುತ್ತಿವೆ. ಇಂಥ ಬಣ್ಣಗಳಿಗೆ ಸಾಂಸ್ಕೃತಿಕ ಭಾವ ಬೆರೆಸಿ ಬರೆದ ಕಲಾಕೃತಿಗಳು, ಬೆರಗು ಹುಟ್ಟಿಸುವ ಕಥನ ಸುರುಳಿಯನ್ನು ಬಿಚ್ಚಿಡುತ್ತಿವೆ.

ಚರಿತ್ರೆಗೆ ಚಾಕ್ಷುಷ ರೂಪ ನೀಡುವ ಕುಶಲತೆಯ ಹಿಂದೆ ಎಂಟು ಕಲಾವಿದೆಯರ ಪರಿಶ್ರಮ ಇದೆ. ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿರುವ ಈ ಕಲಾವಿದೆಯರು, ಚಿತ್ರಕಲೆಯ ಮೋಹದಿಂದ ಒಂದು ಸೂರಿನಡಿ ಬಂದಿದ್ದಾರೆ. ಅವರ ಕುಂಚದ ಕೈಗಳು ಭಾವದ ಬೆಸುಗೆಯಲ್ಲಿ ಇತಿಹಾಸದ ಪಾಠ ಕಟ್ಟಿವೆ.

ಬಣ್ಣ ಚರಿತ್ರೆಯನ್ನೂ ರೂಪಿಸುತ್ತದೆ ಎಂದು ಈ ಪ್ರಮೀಳೆಯರು ನಿರೂಪಿಸಿದ್ದಾರೆ. ಸಾಮಾಜಿಕ ಮತ್ತು ಆರ್ಥಿಕವಾಗಿ ವಿಭಿನ್ನ ಹಿನ್ನೆಲೆಯ ಎಂಟು ಮಂದಿ, ತಮ್ಮ ಕಲಾಗುರು ಎಬೆ ಎನ್‌. ಜೋಸೆಫ್ ಅವರ ಸೃಜನಶೀಲ ಚಿಂತನೆಯಡಿ, 'ಕಲರ್ಸ್ ಆಫ್ ಕನ್ನಡ' ಎಂಬ ಕೂಸಿಗೆ ಜೀವ ತುಂಬಿದ್ದಾರೆ. ಕೇರಳ ಮೂಲದ ಜೋಸೆಫ್ ಕರ್ನಾಟಕದ ಜೊತೆ ನಿಕಟ ಸಂಬಂಧ ಹೊಂದಿದವರು, ಕರ್ನಾಟಕದ ಚಿತ್ರಕಲಾ ಪರಿಷತ್ತಿನ ಜೊತೆ ಒಡನಾಟ ಹೊಂದಿದವರು. ಅವರ ಸಲಹೆಯಂತೆ 'ಕಲರ್ಸ್ ಆಫ್ ಕನ್ನಡ' ಯೋಜನೆ ಸಾಕಾರಗೊಂಡಿದೆ ಎನ್ನುತ್ತಾರೆ ಕಲಾವಿದೆ ಸ್ನೇಹಾ ಮುರಳೀಧರ್.

ಎಂಟು ಕಲಾವಿದೆಯರು, ಕರ್ನಾಟಕ ಸಾಂಸ್ಕೃತಿಕ ಇತಿಹಾಸದ ಭಾಗ ಆಗಿರುವ ಎಂಟು ಮಹನೀಯರ ವ್ಯಕ್ತಿತ್ವಗಳನ್ನು ಇಟ್ಟುಕೊಂಡು, ಅವರ ತಲಾ ಮೂರು ಚಿತ್ರಗಳನ್ನು ರೂಪಿಸಿದ್ದಾರೆ. ಈ ಕಲಾಕೃತಿಗಳ ಮೂಲಕ ಅವರ ಬದುಕಿನ ಪುಟ್ಟ ಚರಿತ್ರೆಯನ್ನು ಕಟ್ಟುವ ಪ್ರಯತ್ನ ಮಾಡಿದ್ದಾರೆ. ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ, ಜ. 16ರಂದು ಆರಂಭವಾಗಿರುವ ಈ ಪ್ರದರ್ಶನ ಜ. 22ರವರೆಗೆ ನಡೆಯಲಿದೆ.

'ಅಷ್ಟ ಬಳಗ'ದ ಕಲಾವಿದೆಯರಲ್ಲಿ ಒಬ್ಬರಾದ ಸೀಮಾ ವಿ.ಸಿ. ಮೂಲತಃ ಶಿಕ್ಷಕಿ. ಫ್ಯಾಷನ್ ಇಲ್ಲಸ್ಟ್ರೇಟರ್ ಕೂಡ. ಅವರು ವಚನ ಸಾಹಿತ್ಯ ಚಳವಳಿಗೆ ಶಕ್ತಿ ತುಂಬಿದ ಬಸವಣ್ಣನ ವ್ಯಕ್ತಿತ್ವವನ್ನು ಬಣ್ಣಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಲಕ್ಷ್ಮಿ ಸುನಂದ್ ಕೇರಳ ಮೂಲದವರು, ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರು ರಾಷ್ಟ್ರಕವಿ ಕುವೆಂಪು ಅವರ ಚಿತ್ರಗಳನ್ನು ರೂಪಿಸಿದ್ದಾರೆ.



